# ಪ್ರಿ ಓನ್ಡ್ ಕಾರುಗಳು

ತನ್ನೊಡೆಯನಿಂದ ದೂರಾಗಿ
ಕಾದಿದ್ದಾವೆ ಹೊಸ ಯಜಮಾನರ
ಆಗಮನಕ್ಕಾಗಿ
ಯಾರೂ ಕೊಳ್ಳುವವರಿಲ್ಲದೆ
ಆಗ ಬಂದಾರು ಈಗ ಬಂದಾರು
ಎಂಬ ನಿರೀಕ್ಷೆಯಲ್ಲಿ ಬಿಸಿಲು ಮಳೆ
ದೂಳುಗಳಿಗೆ
ಮೈಯೊಡ್ಡಿ ಬಿಕರಿಗಾಗಿ ಕಾಯುತ್ತಿವೆ
ಹೊಸಮಾಲೀಕನ ಬರವಿಗಾಗಿ!

ಕುಟುಂಬದ ಹೊರೆಹೊತ್ತು
ಉಬ್ಬು ತಗ್ಗುಗಳಲ್ಲಿ ಹತ್ತಿಳಿದು ಓಡಾಡಿ
ಕಾಲುನೋಯಿಸಿಕೊಂಡು ಬಸವಳಿದರೂ
ಶೃಂಗಾರಗೊಂಡಿವೆ ನವವಧುಗಳಂತೆ;
ಮತ್ತೆ ಮರುಮದುವೆಗೆ ಸನ್ನದ್ಧರಾಗಿ!


ಪೇಟೆಯ ಬೀದಿಯಲ್ಲಿ ಅಗ್ಗವಾಗಿ
ಹಲವರ ವಾರೆನೋಟಕ್ಕೆ ಸವೆದು
ಆಗೀಗ ಮೈ ನೇವರಿಸಿ ಖುಷಿಪಡುವ
ಕೈಯ್ಗಳಿಗೆ ಮೈ ನೀಡಿ
ತಮ್ಮನ್ನು ತಾವೇ ಮಾರಿಕೊಳ್ಳಲು
ಕಾದಿದ್ದಾರೆ
ಹೊಸಗಿರಾಕಿಗಳ ಬರವಿಗಾಗಿ!

ಒಡೆಯನ ಮನೆಮಕ್ಕಳ ಪ್ರೀತಿಗೆ ಪಕ್ಕಾಗಿ
ಒಡತಿಯ ಆಸನಕ್ಕೆ ಬೆನ್ನೊಡ್ಡಿ
ಮೈ ಸವೆಸಿ ಸೇವೆ ಮಾಡಿಯೂ
ಕರಳು ತುಂಡರಿಸಿ ಪರರಿಗೊಪ್ಪಿಸಿದ
ನಿಷ್ಕರುಣಿ ತಂದೆ!

ತವರುಮನೆಯ ದಾರಿ ಕಡಿದ ಮೇಲೆ
ಹೊಸ ಗಂಡನ ದಾರಿ ಹಿಡಿಯಲು
ವಿಷಾದದ ಭಾರಹೊತ್ತು
ಸುರಿಸುತ್ತಿವೆ ಕಣ್ಣೀರು!

ಅಗಲಿದ ನೋವು; ಅಗಲಿಕೆಯ ಕಾವು
ಬಟ್ಟಬಯಲಲ್ಲಿ ಮಾನ ಹರಾಜಿಗಿಟ್ಟ
ಅಪ್ಪನ ನೆನೆದು
ಭಾವಭಾರದಿಂದ ಹೆಪ್ಪುಗಟ್ಟಿದೆ
ಪರಿತ್ಯಕ್ತೆಯರ ಕಣ್ಣೀರು!

● **ಮೋಹನ ಕುಂಟಾರ್**



ವಾಗೀಶ ಹೆಗಡೆ